ಹೋಗುವ ಮೂಲಕ ಇವೊತ್ತು ತಮ್ಮ ಜೀವನವನ್ನೇ ಜನಸೇವೆಗೋಸ್ಕರ ಮುಡಿಪಾಗಿಟ್ಟು ಶ್ರಮಪಟ್ಟು ಕೆಲಸ ಮಾಡಿ ಕೊನೆ ದಿವಸದಲ್ಲಿ ನಿಧನರಾದಾಗ ನಿಜವಾಗಿಯೂ ಅವರು ಅನೇಕ ಜನರಿಗೆ ಒಳ್ಳೆಯ ಕೆಲಸ ಮಾಡಿರುತ್ತಾರೆ. ಅವೊತ್ತು ಜನರ ಮನಸ್ಸಿನಲ್ಲಿ ನಿಜವಾಗಿಯೂ ಅನಿಸುತ್ತದೆ. ಅತ್ಯುತ್ತಮ ನಾಯಕರನ್ನು ಕಳೆದುಕೊಂಡಿದ್ದೇವೆ, ಅವರು ಅನೇಕ ಬಡಜನರಿಗೆ ಹಾಗೂ ಸಾಮಾನ್ಯ ಜನರಿಗೆ ಸಹಾಯ ಮಾಡಿದಂಥ ಶಾಸಕರಾಗಿದ್ದ ಅಂತಹ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆಂದು ಸಮಾಜದಲ್ಲಿ ಲೋಕರೂಢಿಯಾಗಿ ಆಡುವಂಥ ಪರಿಸ್ಥಿತಿ ಇದೆ. ಅದರಲ್ಲೂ ನಾವು ಶಾಸಕರಾಗಿ ಇಲ್ಲಿ ಏನು ಕೆಲಸ ಮಾಡಿರುತ್ತೇವೆ, ಇನ್ನು ಮುಂದೆ ಪ್ರತಿಯೊಬ್ಬರೂ ಕೂಡ ಅವರ ನಿಜವಾದ ಸೇವೆಯನ್ನು ಸ್ಮರಿಸುವುದು ನಮ್ಮ ಸಂಸ್ಕೃತಿ, ಪರಂಪರೆಗೆ ಮೊಟ್ಟಮೊದಲನೆಯ ದಾರಿಯಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಪಂಪಾಪತಿಯವರು ವಿಧಾನಸಭೆಯ ಸದಸ್ಯರಾಗಿ 1927ನೇ ಇಸವಿಯಲ್ಲಿ ಅಂದರೆ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ರಾಜಕಾರಣಕ್ಕೆ ಬಂದವರು. ಅವರು ಈ ರಾಜ್ಯದ ಪ್ರಜೆಗಳಿಗೆ ಮತ್ತು ರಾಜ್ಯಾಂಗಕ್ಕೆ ನೀಡಿರುವ ಸೇವೆ ಉತ್ತಮವಾಗಿದೆ. ಅವರು ಒಬ್ಬ ಕಾರ್ಮಿಕ ನಾಯಕರಾಗಿ ಅನೇಕ ಸಂಘಟನೆಗಳಲ್ಲಿ ಕಾರ್ಯನಿರ್ವಹಿಸಿ ಕಾರ್ಮಿಕರ ಹಿತಚಿಂತನೆ ನಡೆಸಿ ಅವರಿಗೆ ಅನುಕೂಲ ಮಾಡಿಕೊಟ್ಟಂಥ ಉತ್ತಮ ಶಾಸಕರಾಗಿದ್ದರು. ಅಂತಹವರು ಇವೊತ್ತು ಕೊನೆಯುಸಿರೆಳೆದಿರುವುದು ರಾಜಕೀಯ ಕ್ಷೇತ್ರಕ್ಕಾಗಿರುವ ನಷ್ಟವೆಂದು ಹೇಳುತ್ತಾ ಪರಮಾತ್ಮನು ಅವರ ಆಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕೊಡಲೆಂದು ಹಾಗೂ ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ದೇವರಲ್ಲಿ ಪ್ರಾರ್ಥಿಸಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಸಭೆಯ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಸದನವು ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಿತು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

2. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಮೂಲಕ ನೀಡಲಾದ ಉತ್ತರಗಳು

ಕುಂದಾಪುರ ತಾಲ್ಲೂಕಿನ ಶಿರೂರು ಅಳಿವೆಯಲ್ಲಿ ಸರ್ಕಾರಿ ಮಂಜುಗೆಡ್ಡೆ ಕಾರ್ಖಾನೆ ಕುರಿತು

41 (141) - ಶ್ರೀ ಗೋಪಾಲ್ ಪೂಜಾರಿ. ಕೆ. (ಬೈಂದೂರು) ಮಾನ್ಯ ಶ್ರೀ ಮೀನುಗಾರಿಕೆ ಹಾಗೂ ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಶಿರೂರು ಅಳಿವೆಯಲ್ಲಿ ಸರ್ಕಾರಿ ಮಂಜುಗೆಡ್ಡೆ ಕಾರ್ಖಾನೆಯನ್ನು ಇಲಾಖೆಯು ಖಾಸಗಿಯವರಿಗೆ ಗುತ್ತಿಗೆ ನೀಡಿರುವುದು ನಿಜವೇ?

ಅ) ಇದೀಗ ಖಾಸಗಿಯವರು ಇದನ್ನು ಮಾಡದೇ ಹಾಳು ಬಿಟ್ಟಿರುವುದು ನಿಜವೆ?

ಇ) ಈ ಕಾರ್ಖಾನೆಯನ್ನು ದಕ್ಷಿಣ ಕನ್ನಡ ಮೀನುಗಾರರ ಫೆಡರೇಷನ್ ಮುಖಾಂತರ ನಡೆಸಬಹುದಲ್ಲವೇ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರುಗಳ ರಾಜ್ಯ ಸಚಿವರು) :

ಅ) ಹೌದು.

ಆ) ಮಂಜುಗೆಡ್ಡೆ ಕಾರ್ಖಾನೆಯನ್ನು ದಿನಾಂಕ: 14-3-1996 ರಿಂದ ಐದು ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿತ್ತು. ಆದರೆ ಈ ಅವಧಿ ಮುಗಿಯುವುದಕ್ಕಿಂತ ಮುಂಚಿತವಾಗಿಯೇ ಗುತ್ತಿಗೆದಾರರು ಕಾರ್ಖಾನೆಯನ್ನು ದಿನಾಂಕ 10-2-1999 ರಂದು ಇಲಾಖೆಯ ವಶಕ್ಕೆ ಹಿಂದಿರುಗಿಸಿರುತ್ತಾರೆ.

ಇ) ಅಂತಹ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

+ ಶ್ರೀ ಕೆ. ಗೋಪಾಲ ಪೂಜಾರಿ : ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ಶಿರೂರಿನಲ್ಲಿದ್ದ ಮಂಜುಗೆಡ್ಡೆ ಕಾರ್ಖಾನೆಯನ್ನು 1996ನೇ ಇಸವಿಯಲ್ಲಿ ಖಾಸಗಿಯವರಿಗೆ ವರ್ಗಾಯಿಸಿದ್ದಾರೆ. ಆದರೆ, ಗುತ್ತಿಗೆ ಕೊಟ್ಟಿದ್ದರೂ ಅವಧಿಗೆ ಮುಂಚಿತವಾಗಿ ಸರ್ಕಾರಕ್ಕೆ 1999ರಲ್ಲಿ ಮೀನುಗಾರಿಕೆ ಇಲಾಖೆಗೆ ವಾಪಸ್ಸು ಕೊಟ್ಟ ನಂತರ ಈ ಮಂಜುಗೆಡ್ಡೆ ಕಾರ್ಖಾನೆಯನ್ನು ಇಲ್ಲಿಯವರೆಗೆ ಪ್ರಾರಂಭಿಸುವ ಬಗ್ಗೆ ಇಲಾಖೆ ಚಿಂತನೆ ಮಾಡಲಿಲ್ಲ. ಆದರೆ, ಶಿರೂರು ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿದ್ದು, ಮೀನುಗಾರರೇ ಇರುವಂಥ ಅತ್ಯಂತ ದೊಡ್ಡ ಗ್ರಾಮವಾಗಿದೆ. ಇವೊತ್ತು ಅಲ್ಲಿಯ ಜನರಿಗೆ ಮೀನನ್ನು ರಕ್ಷಿಸಿಡುವುದಕ್ಕೆ ಭಟ್ಕಳಕ್ಕೆ ಹೋಗಬೇಕು. ಅಲ್ಲಿ ಸಿಗದಿದ್ದಾಗ ಮತ್ತಷ್ಟು ದೂರ ಹೋಗಿ ಮಂಜುಗೆಡ್ಡೆ ತರಬೇಕಾಗುತ್ತದೆ. ಮಂಜುಗಡ್ಡೆಗಾಗಿ ಸಾಕಷ್ಟು ದೂರ ಹೋಗಬೇಕಾಗಿರುವುದರಿಂದ ಅವರಿಗೆ ತೊಂದರೆಯುಂಟಾಗಿದೆ. ಇವೊತ್ತು ಶಿರೂರಿನಲ್ಲಿರುವ ಮೀನುಗಾರರಿಗೆ ಮಂಜುಗೆಡ್ಡೆ ಕಾರ್ಖಾನೆ ಬಂದ್ ಆಗಿದ್ದರಿಂದ ಬಹಳಷ್ಟು ಸಮಯ ಹಾಳಾಗುತ್ತಿದೆ ಮತ್ತು ಹಣ ದೊಡ್ಡ ರೀತಿಯಲ್ಲಿ ನಷ್ಟವಾಗುತ್ತಿದೆ. ಆದುದರಿಂದ, ಈ ಮಂಜುಗಡ್ಡೆ ಕಾರ್ಖಾನೆಯನ್ನು ಇಲಾಖೆಯವರು ಫೆಡರೇಶನ್ನಿಗೆ ಕೊಡಲು ಆಗುತ್ತದೆಯೇ? ಎಂದು ಕೇಳಿರುವುದಕ್ಕೆ ಉತ್ತರವಾಗಿ ಇಲ್ಲವೆಂದಿದ್ದಾರೆ. ದಯವಿಟ್ಟು ಶಿರೂರಿನ ಮೀನುಗಾರರಿಗೆ ಈ ಮಂಜುಗೆಡ್ಡೆ ಕಾರ್ಖಾನೆಯನ್ನು ಇಲಾಖೆಯು ಪುನರಾರಂಭ ಮಾಡಬೇಕಾಗಿದೆ. ಇಲ್ಲದಿದ್ದರೆ ಫೆಡರೇಶನ್ ಮುಖಾಂತರವಾದರೂ ಇದನ್ನು ಪ್ರಾರಂಭಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲದೆ, ಅಲ್ಲಿರುವ ಸಿಬ್ಬಂದಿ ವಸತಿ ಗೃಹ ಹಾಳಾಗಿದೆ. ಅದನ್ನೂ ಸಹ ರಿಪೇರಿ ಮಾಡಬೇಕಾಗಿದೆ. ಹಾಗೂ ಅಲ್ಲಿನ ಪರಿಸರದಲ್ಲಿರುವ ಜಟ್ಟಿ ಸಹ ರಿಪೇರಿ ಮಾಡುವಂಥ ಅವಶ್ಯಕತೆ ಇರುವುದರಿಂದ ಅದನ್ನು ಯಾವಾಗ ರಿಪೇರಿ ಮಾಡುತ್ತೀರಿ? ಕರಾವಳಿ ಪ್ರದೇಶದಲ್ಲಿರುವ ಮೀನುಗಾರಿಕೆ ರಸ್ತೆಯ ನಿರ್ವಹಣೆಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಇದಕ್ಕೆ ಯಾವಾಗ ಹಣ ಬಿಡುಗಡೆ ಮಾಡುತ್ತೀರಿ ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

+ ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಒಂದು ಸ್ಪಷ್ಟೀಕರಣ ಕೇಳಬಯಸುವುದೇನೆಂದರೆ, ತಾವು ಮಂಜುಗಡ್ಡೆ ಕಾರ್ಖಾನೆಯನ್ನು ಮೀನುಗಾರರ ಫೆಡರೇಶನ್

ಮುಖಾಂತರ ನಡೆಸುವ ಪ್ರಸ್ತಾವನೆ ಇಲ್ಲವೆಂದು ಹೇಳಿದ್ದೀರಿ. ಹಾಗಾದರೆ ಸರ್ಕಾರದಿಂದ ನಡೆಸುತ್ತೀರಾ? ಇಲ್ಲವೇ ಪ್ರೈವೇಟ್‌ನವರಿಗೆ ಟೆಂಡರ್ ಮುಖಾಂತರ ಕೊಡುತ್ತೀರಾ? ಇದನ್ನು ಸದನಕ್ಕೆ ತಿಳಿಸಬೇಕು.

+ ಶ್ರೀ ವಸಂತ ಎ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಕುಂದಾಪುರ ತಾಲ್ಲೂಕಿನ ಶಿರೂರು ಅಳಿವೆಯಲ್ಲಿ ಸರ್ಕಾರದ ವತಿಯಿಂದ ಮಂಜುಗಡ್ಡೆ ಕಾರ್ಖಾನೆಯನ್ನು ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ 1978-79 ರಲ್ಲಿ ಪ್ರಾರಂಭ ಮಾಡಿದ್ದೇವೆ. ಅನೇಕ ವರ್ಷಗಳಿಂದ ಈ ಮಂಜುಗಡ್ಡೆ ಕಾರ್ಖಾನೆಯನ್ನು ಗುತ್ತಿಗೆ ಆಧಾರದ ಮೇರೆಗೆ ವಹಿಸಿಕೊಟ್ಟು ನಡೆಸಿಕೊಂಡು ಬರಲಾಗುತ್ತಿದೆ. 1995-96ರಲ್ಲಿ ಈ ಮಂಜುಗಡ್ಡೆ ಕಾರ್ಖಾನೆಯಿಂದ ಸುಮಾರು 1 ಲಕ್ಷ 83 ಸಾವಿರ ರೂಪಾಯಿ ಆದಾಯ ಬಂದಿದ್ದರೆ, 96-97ರಲ್ಲಿ 1 ಲಕ್ಷ 93 ಸಾವಿರದ 618 ರೂಪಾಯಿಗಳು, ಅದೇ ರೀತಿ 97-98 ರಲ್ಲಿ 1 ಲಕ್ಷ 22 ಸಾವಿರದ 202 ರೂಪಾಯಿಗಳಷ್ಟು ಆದಾಯ ಬಂದಿತ್ತು, ಆದರೆ, ಕಾರಣಾಂತರಗಳಿಂದ ಈ ಮಂಜುಗೆಡ್ಡೆ ಕಾರ್ಖಾನೆಯನ್ನು 14.3.96 ರಲ್ಲಿ ಐದು ವರ್ಷಗಳ ಅವಧಿಯವರೆಗೆ ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಿದ ನಂತರ ಅವಧಿ ಮುಗಿಯುವ ಮುಂಚೆಯೇ 10.2.99 ರಂದು ಅದನ್ನು ಇಲಾಖೆಗೆ ವಾಪಸ್ಸು ಮಾಡಿದರು. ಇದರಿಂದಾಗಿ ಅಲ್ಲಿ ಏನಾಗಿದೆಯೆಂದರೆ, ಕಾರ್ಖಾನೆಯ ಮೆಷಿನರಿ ಎಲ್ಲವೂ ಹಾಳಾಗಿದ್ದು, ಅದನ್ನು ಸರಿಪಡಿಸಬೇಕಾದರೆ ಸುಮಾರು ಐದು ಲಕ್ಷ ರೂಪಾಯಿ ವೆಚ್ಚವಾಗುತ್ತದೆ. ಆದ್ದರಿಂದ, ಶಿರೂರಿನ ಆಸುಪಾಸು ಹಾಗೂ ಇಡೀ ಕರಾವಳಿ ಪ್ರದೇಶದಲ್ಲಿ ಸುಮಾರು 152 ಮಂಜುಗಡ್ಡೆ ಕಾರ್ಖಾನೆಗಳಿವೆ. ಇದರಿಂದಾಗಿ ನಮ್ಮ ಇಲಾಖೆಯವರು ಸರ್ವೆ ಮಾಡಿರುವ ರೀತ್ ಆ ಮಂಜುಗಡ್ಡೆ ಕಾರ್ಖಾನೆಯಲ್ಲಿರುವ ಮೆಷನರಿ ಬದಲಾಯಿಸಬೇಕಾದರೆ ಸುಮಾರು ಐದು ಲಕ್ಷ ರೂಪಾಯಿಗಳು ವೆಚ್ಚವಾಗುತ್ತದೆ. ಅಲ್ಲಿ ಆಸುಪಾಸಿನಲ್ಲಿ ಅನೇಕ ಮಂಜುಗಡ್ಡೆ ಕಾರ್ಖಾನೆಗಳಿರುವುದರಿಂದ ಇಲ್ಲಿ ಮಂಜುಗಡ್ಡೆ ಕಾರ್ಖಾನೆ ಅಗತ್ಯವಿಲ್ಲವೆನ್ನುವ ರೀತಿಯಲ್ಲಿ ಅಲ್ಲಿನ ನಮ್ಮ ಇಲಾಖಾಧಿಕಾರಿಗಳು ರಿಪೋರ್ಟ್ ಕಳುಹಿಸಿದ್ದಾರೆ. ಒಂದು ವೇಳೆ ಮಂಜುಗಡ್ಡೆ ಕಾರ್ಖಾನೆ ಆ ಭಾಗದಲ್ಲಿ ಅಗತ್ಯವಿದ್ದರೆ ನಾವು ಇಲಾಖಾ ವತಿಯಿಂದ ಅದನ್ನು ಸರಿಪಡಿಸುವುದಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ. ಆದರೆ, ನಾವು ಸರ್ವೆ ಮಾಡಿರುವ ಪ್ರಕಾರ ಈ ಮಂಜುಗಡ್ಡೆ ಕಾರ್ಖಾನೆ ಅಲ್ಲಿ ಅಗತ್ಯವಿಲ್ಲ ಎನ್ನುವ ರೀತಿಯಲ್ಲಿ ನಮ್ಮ ಅಧಿಕಾರಿಗಳು ಸ್ಪಷ್ಟವಾಗಿ ನಮಗೆ ಮಾಹಿತಿ ನೀಡಿದ್ದಾರೆ.

ಶ್ರೀ ಗೋಪಾಲ ಪೂಜಾರಿ : ಇವೊತ್ತು ಅಲ್ಲಿರತಕ್ಕ ಆ ಕಾರ್ಖಾನೆ ಮತ್ತು ವಸತಿಗೃಹ ಮಾಡಬೇಕಾದರೆ ಒಂದು ಕೋಟಿ ರೂಪಾಯಿಗೂ ಹೆಚ್ಚು ಹಣ ವೆಚ್ಚವಾಗುತ್ತದೆ. ಶಿರೂರು ಸುಮಾರು ಹತ್ತು ಸಾವಿರದಷ್ಟು ಜನಸಂಖ್ಯೆಯಿರುವ ಅತ್ಯಂತ ದೊಡ್ಡ ಗ್ರಾಮವಾಗಿದ್ದು, ಶಿರೂರು ಎಂದರೆ ಕರಾವಳಿ ಪ್ರದೇಶ ಆವರಿಸಿಕೊಂಡಿರುವ ಮೀನುಗಾರರು ಇರುವಂಥ ಗ್ರಾಮವಾಗಿದೆ. ಇವೊತ್ತು ಅಲ್ಲಿ ಮೀನುಗಳನ್ನು ರಕ್ಷಿಸಲು ಮಂಜುಗಡ್ಡೆ ಬೇಕಾದರೆ ಭಟ್ಕಳದಲ್ಲಿ ಸಿಗದಿದ್ದರೆ ಅದಕ್ಕೂ ಮುಂದೆ ಹೋಗಿ ತರುವಂಥ ಪರಿಸ್ಥಿತಿ ಮೀನುಗಾರರಿಗೆ ಹೀಗಿರುವಾಗ ಇಲಾಖಾಧಿಕಾರಿಗಳು ಸಚಿವರಿಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ದಯವಿಟ್ಟು ಅಲ್ಲಿ ಕಾರ್ಖಾನೆ ರಿಪೇರಿಯಾಗಿ ಉದ್ಘಾಟನೆಯಾಗಬೇಕಾಗಿದೆ. ಅಲ್ಲಿ ವಸತಿಗೃಹ ಸಹ ದುರಸ್ತಿಯಾಗಿ ವ್ಯವಸ್ಥೆ ಮಾಡಿಕೊಡಬೇಕೆಂದು ತಮ್ಮ ಮುಖೇನ ಸಚಿವರನ್ನು ಮತ್ತೊಮ್ಮೆ ಒತ್ತಾಯಿಸುತ್ತೇನೆ.

ಶ್ರೀ ವಸಂತ, ಏ. ಸಾಲಿಯಾನ : ಮಾನ್ಯ ಅಧ್ಯಕ್ಷರೇ ನಮ್ಮ ಇಲಾಖಾಧಿಕಾರಿಗಳು ತಪ್ಪು ಮಾಹಿತಿ ಕೊಡಲಿಲ್ಲ. ನನಗೆ ತಿಳಿದ ಪ್ರಕಾರ ಆ ಮಂಜುಗೆಡ್ಡೆ ಕಾರ್ಖಾನೆ ಆ ಭಾಗದಲ್ಲಿ ಒಂದು ವೇಳೆ ಪ್ರಾರಂಭಿಸದಿದ್ದರೂ ಸಹ ಬೇಕಾದಷ್ಟು ಐಸ್ ಪ್ಲಾಂಟ್‌ಗಳು ಅಲ್ಲಿರುವುದರಿಂದ ಯಾವುದೇ ಮೀನುಗಾರರಿಗೆ ತೊಂದರೆಯಾಗದ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಮಾನ್ಯ ಸದಸ್ಯರು ಅಲ್ಲಿ ಆ ಐಸ್ ಪ್ಲಾಂಟ್ ಮೆಷಿನರಿಗಳನ್ನು ಚೇಂಜ್ ಮಾಡಿ ಅದಕ್ಕೆ ಆಗತ್ಯವಿದೆ ಎನ್ನುವ ರೀತಿಯಲ್ಲಿದ್ದರೆ ಖಂಡಿತವಾಗಿ ನಾನು ಪರಿಶೀಲಿಸಿ ಅದಕ್ಕೆ ಬೇಕಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಕೇಳುವುದಕ್ಕೆ ಮೊದಲು ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ ಇವೊತ್ತು ಹದಿನೈದು ಪ್ರಶ್ನೆಗಳಿಗೂ ಉತ್ತರಗಳು ಬಂದಿದೆ. ದಯವಿಟ್ಟು ಯಾರು ಪ್ರಶ್ನೆಗೆ ಸಂಬಂಧಪಟ್ಟಿರುತ್ತಾರೋ ಮೂಲ ಪ್ರಶ್ನೆ ಕೇಳಿರುವವರು ಅವರು ಮಾತ್ರ ಕೇಳಿ ಸಹಕರಿಸಬೇಕು ಇವೊತ್ತೇನಾದರೂ ಪ್ರಶ್ನೆಗಳು ಲ್ಯಾಪ್ಸ್ ಆದರೆ ಮುಂದಿನ ವಾರ ಬರುತ್ತದೋ ಇಲ್ಲವೋ ಎಂದು ನಾನು ಹೇಳುವುದಕ್ಕಾಗುವುದಿಲ್ಲ. I can't guarantee you

ಎರಡನೆಯ ಪ್ರಕಟಣೆ, ಮಾನ್ಯ ಸಭಾಪತಿಯವರು ಬಂದು ಏತಕ್ಕೆ ರಾಜೀನಾಮೆ ಕೊಟ್ಟಿದ್ದರು ಎಂಬುದನ್ನು ಹೇಳಬೇಕು.

ಅಧ್ಯಕ್ಷರು: ಅವರದು ಪ್ರಶ್ನೆಯಿದೆ, ಅವರ ಪ್ರಶ್ನೆ ಹೊರಹೋಗುತ್ತದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಇಲ್ಲದಿದ್ದರೆ ಆ ಮೇಲೆ ಅನೌನ್ಸ್ ಮಾಡುತ್ತಿದ್ದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅವರು ಏಕೆ ರಾಜೀನಾಮೆ ಕೊಟ್ಟರು ಎಂಬ ಬಗ್ಗೆ ಸದನಕ್ಕೆ ಬಂದು ಹೇಳಬೇಕು.

ಅಧ್ಯಕ್ಷರು : ಅವರು ಬರುವುದಕ್ಕೆ ಮೊದಲು ಅನೌನ್ಸ್ ಮಾಡಬೇಕೆಂದು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ಮುಂದಿನ ಪ್ರಶ್ನೆ ಶಿವಳ್ಳಿ ಚನ್ನಬಸಪ್ಪ, ಆರಗಜ್ಞಾನೇಂದ್ರ, ಸದಸ್ಯರುಗಳು ಗೈರುಹಾಜರಿದ್ದಾರೆ. ಮಾನ್ಯ ಕೆ.ಎನ್. ಸುಬ್ಬಾರೆಡ್ಡಿಯವರು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಕೀಲರುಗಳಿಗೆ ತರಬೇತಿ ಸಹಾಯಧನ

117 (1226) - ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಕೀಲರುಗಳಿಗೆ ತರಬೇತಿಗಾಗಿ ನೀಡುತ್ತಿರುವ ಸಹಾಯಧನ ಕಡಿಮೆ ಇದ್ದು ಇದನ್ನು ಹೆಚ್ಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಆ) ಈ ಸಹಾಯ ಧನವನ್ನು ರಾಜ್ಯದಲ್ಲಿ ಕೆಲವೇ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಕೀಲರುಗಳಿಗೆ ನೀಡುತ್ತಿದ್ದು, ರಾಜ್ಯದಲ್ಲಿ ತರಬೇತಿ ಪಡೆಯುವ ಎಲ್ಲಾ ಪರಿಶಿಷ್ಟ ಜಾತಿ ಪರಿಶಿಷ್ಟ ಪಗಡದ ವಕೀಲರುಗಳಿಗೆ ಸಹಾಯ ಧನ ನೀಡಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :